ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ:ಡಿಟಿಇ/ಎನ್‌ಎಸ್‌ಎಸ್/01/ಐಡಿಪಿ/2023-24

ಆಯುಕ್ತರ ಕಛೇರಿ,
ಅರಮನೆ ರಸ್ತೆ, ಬೆಂಗಳೂರು -01
ದಿನಾಂಕ:01.02.2024

## ಸುತ್ತೋಲೆ

ವಿಷಯ: ಡಾ.ರಾಜ್‌ಕುಮಾರ್ ಆಕಾಡಮಿ ವತಿಯಿಂದ **IAS/KAS** ವಿದ್ಯಾರ್ಥಿವೇತನವನ್ನು ಪಡೆದುಕೊಳ್ಳುವ ಬಗ್ಗೆ.
ಉಲ್ಲೇಖ: ರಾಜ್ಯ ಸರ್ಕಾರದ ಪತ್ರ ಸಂಖ್ಯೆಯುಸೇಇ/ರಾ.ಸೇ.ಯೋ/19/2021/2023-24/488 ದಿನಾಂಕ: 31.01.2024

****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಸೇವಾ ಯೋಜನಾ ಕೋಶ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ಡಾ. ರಾಜ್ ಕುಮಾರ್ ಅಕಾಡೆಮಿ ಫಾರ್ ಸಿವಿಲ್ ಸರ್ವಿಸಸ್ ಸಂಸ್ಥೆಯ ಸಹಯೋಗದೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳಿಗೆ **IAS/KAS** ವಿದ್ಯಾರ್ಥಿವೇತನ ಪರೀಕ್ಷೆ 2024 ಅನ್ನು ಪ್ರಕಟಿಸಲಾಗಿದೆ . ಈ ನಿಟ್ಟಿನಲ್ಲಿ ಸದರಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪ್ರಮಾಣದ ಆಧಾರದ ಮೇಲೆ ಸಂಸ್ಥೆಯ ವತಿಯಿಂದ ಡ್ಯುಯಲ್ ಮೋಡ್ ತರಗತಿಗಳು (Dual mode classes), ಸ್ಟಡಿ ಮೆಟೀರಿಯಲ್ ( study material) ಮತ್ತು ಪ್ರಚಲಿತ ವ್ಯವಹಾರಗಳ ನಿಯತಕಾಲಿಕೆ, ( current affairs magazine) ಟೆಸ್ಟ್ ಸರಣಿ ಮತ್ತು ಮಾರ್ಗದರ್ಶನ ವನ್ನು ಒಳಗೊಂಡಿರುವ UPSC ಮತ್ತು KPSC ಕೋರ್ಸ್‌ಗಳನ್ನು ಸೇರಿದಂತೆ ಶೇ 100ರಷ್ಟುರವರೆಗೂ ವಿದ್ಯಾರ್ಥಿವೇತನವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸದರಿ ಅವಕಾಶವನ್ನು ಸಂಸ್ಥೆಯ ವಿದ್ಯಾರ್ಥಿಗಳು ಈ ಕೆಳಕಂಡ ಲಿಂಕ್‌ನ https://t.ly/i0SHX ಮೂಲಕ ನೊಂದಣಿ ಮಾಡಿಕೊಳ್ಳಬಹುದಾಗಿದೆ. ಸದರಿ ಮಾಹಿತಿಯನ್ನು ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದುಕೊಳ್ಳುಬಹುದಾಗಿದೆ ಎಂಬ ಮಾಹಿತಿಯನ್ನು ಪ್ರಾಚಾರ್ಯರುಗಳು ತಿಳಿಸಲು ಸೂಚಿಸಿದೆ.

ಹೆಚ್ಚಿನ ಮಾಹಿತಿಗಾಗಿ www.drrajkumaracademy.com ಜಾಲತಾಣವನ್ನು ವೀಕ್ಷಿಸಬಹುದಾಗಿದೆ.

ನಿರ್ದೇಶಕರು

ಇವರಿಗೆ:

1. ರಾಜ್ಯದ ಎಲ್ಲಾ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ – ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
2. ಪ್ರಾಂತೀಯ ನಿರ್ದೇಶಕರು, ಭಾರತ ಸರ್ಕಾರದ ರಾ.ಸೇ.ಯೋ ಪ್ರಾಂತೀಯ ಕೇಂದ್ರ, ಬಸವನಗುಡಿ ಬೆಂಗಳೂರು-ಇವರ ಮಾಹಿತಿಗೆ
3. ಇ – ಆಡಳಿತ -ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.

D:\16.03.2021\DTE All Files-2023-24\IDP 2023-24

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಂಖ್ಯೆ: ಯುಸೇಇ/ರಾಸೇಯೋ/19/2021/2023-24/488

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 31.01.2024

ಇವರಿಗೆ,
ಕಾರ್ಯಕ್ರಮ ಸಂಯೋಜನಾಧಿಕಾರಿಗಳು,
ಎಲ್ಲಾ ವಿಶ್ವವಿದ್ಯಾಲಯ/ನಿರ್ದೇಶನಾಲಯಗಳು.

ಮಾನ್ಯರೇ,

ವಿಷಯ: ಡಾ. ರಾಜ್‌ಕುಮಾರ್ ಅಕಾಡೆಮಿ ವತಿಯಿಂದ IAS / KAS ವಿದ್ಯಾರ್ಥಿವೇತನವನ್ನು ಪಡೆದುಕೊಳ್ಳುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಡಾ. ರಾಜ್‌ಕುಮಾರ್ ಅಕಾಡೆಮಿ ಫಾರ್ ಸಿವಿಲ್ ಸರ್ವಿಸಸ್ ಸಂಸ್ಥೆಯ ಸಹಯೋಗದೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಾಗುವ ವಿದ್ಯಾರ್ಥಿಗಳಿಗೆ IAS / KAS ವಿದ್ಯಾರ್ಥಿವೇತನ ಪರೀಕ್ಷೆ 2024 ಅನ್ನು ಪ್ರಕಟಿಸಿರುತ್ತಾರೆ. ಈ ನಿಟ್ಟಿನಲ್ಲಿ ಸದರಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಪ್ರಮಾಣದ ಆಧಾರದ ಮೇಲೆ ಸಂಸ್ಥೆಯ ವತಿಯಿಂದ ಡ್ಯುಯಲ್ ಮೋಡ್ ತರಗತಿಗಳು (Dual mode classes), ಸ್ಟಡಿ ಮೆಟೀರಿಯಲ್ (study material) ಮತ್ತು ಪ್ರಚಲಿತ ವ್ಯವಹಾರಗಳ ನಿಯತಕಾಲಿಕೆ, (current affairs magazine) ಟೆಸ್ಟ್ ಸರಣಿ ಮತ್ತು ಮಾರ್ಗದರ್ಶನವನ್ನು ಒಳಗೊಂಡಿರುವ UPSC ಮತ್ತು KPSC ಕೋರ್ಸ್‌ಗಳನ್ನು ಸೇರಿದಂತೆ ಶೇ. 100ರಷ್ಟುರವರೆಗೂ ವಿದ್ಯಾರ್ಥಿವೇತನವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಆದ್ದರಿಂದ, ತಮ್ಮ ವಿಶ್ವವಿದ್ಯಾಲಯ/ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಎನ್.ಎಸ್.ಎಸ್. ಸ್ವಯಂ ಸೇವಕ/ಸೇವಕಿಯರು ಹಾಗೂ ವಿದ್ಯಾರ್ಥಿಗಳು ಸದರಿ ವಿದ್ಯಾರ್ಥಿವೇತನದ ಪರೀಕ್ಷೆಯ ಸದುಪಯೋಗ ಪಡೆದುಕೊಳ್ಳಲು ಈ ಕೆಳಗೆ ನೀಡಲಾಗಿರುವ ಲಿಂಕ್ ನ ಮೂಲಕ ನೋಂದಣಿ ಮಾಡಿಕೊಳ್ಳಲು ತಾವು ಸೂಚಿಸುವುದರ ಮೂಲಕ ತಮ್ಮ ಸಹಕಾರವನ್ನು ಕೋರಲಾಗಿದೆ.

**Registration link: https://t.ly/i0SHX**

**website : www.drrajkumaracademy.com**

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**(ಡಾ. ಪ್ರತಾಪ್ ಲಿಂಗಯ್ಯ)**
ರಾಜ್ಯ ಎನ್.ಎಸ್.ಎಸ್.ಅಧಿಕಾರಿ,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಪ್ರತಿ:
1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ಸರ್ಕಾರ.
2. ಪ್ರಾದೇಶಿಕ ನಿರ್ದೇಶಕರು, ಎನ್.ಎಸ್.ಎಸ್. ಪ್ರಾದೇಶಿಕ ಕಛೇರಿ, ಭಾರತ ಸರ್ಕಾರ.
3. ಡಾ. ರಾಜ್‌ಕುಮಾರ್ ಅಕಾಡೆಮಿ ಫಾರ್ ಸಿವಿಲ್ ಸರ್ವಿಸಸ್, ಬೆಂಗಳೂರು.